ಪಶು ಚಿಕಿತ್ಸಾಲಯ ಮಂಜೂರಾಗದೆ ಇರುವುದರಿಂದ ಆ ಕಟ್ಟಡವನ್ನು ಉಪಯೋಗಿಸಿಕೊಂಡಿರುವುದಿಲ್ಲ. ಹಾಗೆ ಉಪಯೋಗಿಸಿಕೊಳ್ಳದಿರುವ ಸದರಿ ಎರಡು ಕಟ್ಟಡಗಳ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಎಂ.ಜಿ. ಮುಳೆ:- ಮಾನ್ಯ ಅಧ್ಯಕ್ಷರೆ, ಈಗ ಇದ್ದಂತಹ ಪಶು ಚಿಕಿತ್ಸಾಲಯ ಮತ್ತು ಉಜಲಂಬ ಹಾಗೂ ಬೋಸಗಾ ಇವುಗಳ ಅಂತರ 30ರಿಂದ 40ಕಿಲೋಮೀಟರ್ ದೂರವಿದೆ. ಆದ್ದರಿಂದಲ್ಲಿ ಬಹಳ ತೊಂದರೆಯಾಗುತ್ತಿದೆ. ತಾವು ಆ ಎರಡು ಕಟ್ಟಡಗಳಲ್ಲಿ ಆದಷ್ಟು ಶೀಘ್ರವಾಗಿ ಪಶುವೈದ್ಯ ಚಿಕಿತ್ಸಾಲಯ ತೆರೆಯಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಎಂ.ಮಹದೇವ್:- ಸರ್ಕಾರ ಆಸ್ಪತ್ರೆಗಳನ್ನು ಮಂಜೂರು ಮಾಡತಕ್ಕ ಸಂದರ್ಭದಲ್ಲಿ ನಾನು ಅದನ್ನು ಪರಿಶೀಲನೆ ಮಾಡುತ್ತೇನೆ.

ಉತ್ತರ ಕರ್ನಾಟಕ ಭಾಗದಲ್ಲಿ ರೇಷ್ಮೆ ಕೈಗಾರಿಕಾ ಪ್ರದೇಶವೆಂದು ಆಯ್ಕೆ ಮಾಡಿದ ಸ್ಥಳಗಳು

187(1507) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉತ್ತರ ಕರ್ನಾಟಕ ಭಾಗದಲ್ಲಿ ರೇಷ್ಮೆ ಕೈಗಾರಿಕಾ ಪ್ರದೇಶವೆಂದು ಆಯ್ಕೆ ಮಾಡಿದ ಸ್ಥಳಗಳಾವುವು?

ಆ) ಉತ್ತರ ಕರ್ನಾಟಕದ ಪ್ರಗತಿಗಾಗಿ ಸರ್ಕಾರ ಕೈಗೊಂಡ ರೂಪರೇಷೆಗಳಾವುವು?

ಇ) ಈವರೆಗೂ ಆಯ್ಕೆ ಮಾಡಿದ ಸ್ಥಳಗಳಾವುವು? ಇದಕ್ಕಾಗಿ ಸರ್ಕಾರ ಖರ್ಚು ಮಾಡಿದ ಹಣವೆಷ್ಟು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು) :

ಅ) ರೇಷ್ಮೆ ಕೃಷಿಯಲ್ಲಿ ಕೈಗಾರಿಕೆ ಎಂದು ಪರಿಗಣಿಸಿರುವ ಅಭಿವೃದ್ಧಿ ಕೇಂದ್ರಗಳನ್ನು ಉತ್ತರ ಕರ್ನಾಟಕದ ಈ ಕೆಳಕಂಡ ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ.

ಕ್ರ.ಸಂ.	ಜಿಲ್ಲೆ	ಸ್ಥಳ
1.	ಗುಲ್ಬರ್ಗ	ಜೀವರ್ಗಿ
2.	ಬಿಜಾಪುರ	ನವರಸಪುರ
3.	ಬೆಳಗಾಂ	ತಿಗಡಿ
4.	ಬಳ್ಳಾರಿ	ಕೂಡ್ಲಿಗಿ

ಆ) ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ರೇಷ್ಮೆ ಅಭಿವೃದ್ಧಿಗಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1. ರೈತರಿಗೆ ರೇಷ್ಮೆ ವ್ಯವಸಾಯ ಪ್ರಾರಂಭಿಸಲು ಹಿಪ್ಪುನೇರಳೆ ನಾಟಿ ಹುಳು ಸಾಕಣೆ:ಸಲಕರಣೆಗಳ ಖರೀದಿ ಮತ್ತು ಹುಳು ಸಾಕಣೆ ಮನೆ ನಿರ್ಮಾಣಕ್ಕೆ ವಾಣಿಜ್ಯ ಬ್ಯಾಂಕುಗಳ ಮೂಲಕ ಸಾಲ ಸೌಲಭ್ಯ ಒದಗಿಸಲಾಗುತ್ತಿದೆ.

2. ಸುಧಾರಿತ ಹಿಪ್ಪು ನೇರಳೆ ತಳಿಗಳ ಸಸಿಗಳನ್ನು ಬೆಳೆಸಿ, ವಿತರಿಸಲಾಗುತ್ತಿದೆ.

3. ರೈತರಿಗೆ ತಾಂತ್ರಿಕ ಸಲಹೆ ನೀಡಲು ತಾಂತ್ರಿಕ ಸೇವಾ ಕೇಂದ್ರಗಳು: ಗೂಡು ಮಾರಾಟಕ್ಕೆ ಗೂಡಿನ ಮಾರುಕಟ್ಟೆಗಳು ಮತ್ತು ರೋಗರಹಿತ ರೇಷ್ಮೆ ಪಡೆಯಲು ಬಿತ್ತನೆ ಕೋಠಿಗಳನ್ನು ಸ್ಥಾಪಿಸಲಾಗಿದೆ.

4. ಪ್ರಾತ್ಯಕ್ಷತೆ ತರಬೇತಿ ಒದಗಿಸಲು ಮೂಲ ತಳಿ ಬಿತ್ತನೆ ಗೂಡುಗಳನ್ನು ಉತ್ಪಾದಿಸಲು ಹಾಗೂ ಬಿತ್ತನೆ ಕಡ್ಡಿ:ಸಸಿಗಳನ್ನು ಬೆಳೆಸಲು ರೇಷ್ಮೆ ಕೃಷಿ ಕ್ಷೇತ್ರಗಳನ್ನು ಪ್ರಾರಂಭಿಸಲಾಗಿದೆ.

5. ಸಾಂಪ್ರದಾಯಿಕ ಜಿಲ್ಲೆಗಳ ಪ್ರಗತಿಪರ ರೇಷ್ಮೆ ಬೆಳೆಗಾರರ ಜೊತೆಯಲ್ಲಿದ್ದು, ತಾಂತ್ರಿಕ ತರಬೇತಿ ಪಡೆಯಲು ಹೊಸ ಪ್ರದೇಶಗಳ ರೈತರನ್ನು ತರಬೇತಿಗೆ ಆಯ್ಕೆ ಮಾಡಿ ಕಳುಹಿಸಿ, ಹೋಗಿಬರಲು ಪ್ರಯಾಣ ವೆಚ್ಚ ಹಾಗೂ ಶಿಷ್ಯವೇತನ ನೀಡಲು ತಾಂತ್ರಿಕ ತರಬೇತಿ ಒದಗಿಸಲಾಗಿದೆ.

6. ಹೆಚ್ಚು ಇಳುವರಿ ನೀಡುವ ಹೊಸ ರೇಷ್ಮೆ ಹೈಬ್ರಿಡ್ ತಳಿ ಮೊಟ್ಟೆಗಳನ್ನು ರಿಯಾಯಿತಿ ದರದಲ್ಲಿ ಸರಬರಾಜು ಮಾಡಲಾಗುತ್ತಿದೆ.

7. ಹೊಸ ಪ್ರದೇಶಗಳಲ್ಲಿ ಉತ್ಪಾದನೆಯಾಗಿ, ಮಾರಾಟವಾದ ಪ್ರತಿ ಕೆ.ಜಿ. ರೇಷ್ಮೆ ಗೂಡಿಗೆ ರೂ. 5-00ರ ಪ್ರೋತ್ಸಾಹ ಧನ ನೀಡಲಾಗುತ್ತಿದೆ.

8. ಹನಿ ನೀರಾವರಿ ಪದ್ಧತಿ ಅಳವಡಿಕೆ ಮತ್ತು ಹುಳು ಸಾಕಣೆ ಮನೆ ನಿರ್ಮಾಣಕ್ಕೆ ಸಹಾಯಧನ ನೀಡಲಾಗುತ್ತಿದೆ.

9. ಹೊಸ ಪ್ರದೇಶದಲ್ಲಿ ಉತ್ಪಾದನೆಯಾಗಿ ವಹಿವಾಟಾದ ರೇಷ್ಮೆ ಪ್ರತಿ ಕೆ.ಜಿ.ಗೆ ರೂ. 50-00 ಪ್ರೋತ್ಸಾಹಧನ ನೀಡಲಾಗುತ್ತಿದೆ.

10. ರೇಷ್ಮೆ ನೂಲು ಬಿಚ್ಚಾಣಿಕೆಯನ್ನು ಪ್ರೋತ್ಸಾಹಿಸಲು ನೂಲು ಬಿಚ್ಚಾಣಿಕೆ ಘಟಕಗಳ ಸ್ಥಾಪನೆಗೆ ವಾಣಿಜ್ಯ ಬ್ಯಾಂಕುಗಳ ಮೂಲಕ ಸಾಲ ಸೌಲಭ್ಯ ಒದಗಿಸಲಾಗುತ್ತಿದೆ.

11. ಮಲ್ಟಿ ಎಂಡ್ ರೀಲಿಂಗ್ ಘಟಕಗಳ ಸ್ಥಾಪನೆಗೆ ಬಡ್ಡಿ ರಹಿತ ಸಾಲ ಮತ್ತು ಸಹಾಯಧನ ಒದಗಿಸಲಾಗುತ್ತಿದೆ.

12. ಹೊಸ ಪ್ರದೇಶದ ರೇಷ್ಮೆ ಬೆಳೆಗಾರರು ಅದರಲ್ಲೂ ಸಣ್ಣ ಮತ್ತು ಅತೀ ಸಣ್ಣ ರೈತರು ತಾವು ಬೆಳೆದ ಗೂಡುಗಳನ್ನು ಸ್ಥಳೀಯವಾಗಿ ಪ್ರೋತ್ಸಾಹಕ ದರದಲ್ಲಿ ಮಾರಾಟ ಮಾಡಲು ಅನುಕೂಲವಾಗುವಂತೆ, ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ಇ) ಆಯ್ಕೆ ಮಾಡಿದ ಸ್ಥಳಗಳು ಹಾಗೂ ಖರ್ಚು ಮಾಡಿದ ಹಣದ ವಿವರ ಕೆಳಕಂಡಂತಿದೆ.

	ಸ್ಥಳ	ವೆಚ್ಚ (ರೂ.ಲಕ್ಷಗಳಲ್ಲಿ)
1.	ಜೇವರ್ಗಿ	140.62
2.	ನವರಸಪುರ	146.96
3.	ತಿಗಡಿ	155.33
4.	ಕೂಡ್ಲಿಗಿ	125.64
	ಒಟ್ಟು	568.55

ಶ್ರೀ ಹೊನ್ನಾಳ್ಳಿ ಜಬ್ಬಾರ್‌ಖಾನ್ ಹೈಯತ್‌ಖಾನ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಸರಿಯಾದ ಉತ್ತರವನ್ನು ಒದಗಿಸಿದ್ದಾರೆ. ಉಪ ಪ್ರಶ್ನೆ ಕೇಳುವಂಥಾದ್ದು ಏನೂ ಇಲ್ಲ.

ಅಧ್ಯಕ್ಷರು:- ಒದಗಿಸಿರುವ ಉತ್ತರದಿಂದ ತಮಗೆ ತೃಪ್ತಿಯಾಗಿದೆ, ಬಹಳ ಒಳ್ಳೆಯದು. ತಾವು ಬೇಗ ಮುಗಿಸಿದ್ದಕ್ಕೆ ನನಗೂ ತೃಪ್ತಿಯಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ ಇಡೀ ಉತ್ತರ ಕರ್ನಾಟಕಕ್ಕೆ ಸಂಬಂಧಿಸಿದ್ದು ಇದೆ. ಇದು ಒಂದು ಕ್ಷೇತ್ರದ ಬಗ್ಗೆ ಅಲ್ಲ. ಇದು ಬಹಳ ಪ್ರಮುಖವಾದ ಪ್ರಶ್ನೆ. ಜನರಲ್ ಕೊಶ್ಚನ್ ಇದೆ. ಅಂತರರಾಷ್ಟ್ರೀಯ ಮಟ್ಟದ ಬೇರೆ ಬೇರೆ ದೇಶಗಳಿಂದ, ಬೇರೆ ಬೇರೆ ಸಂಸ್ಥೆಗಳಿಂದ ಕರ್ನಾಟಕದಲ್ಲಿ ಅದರಲ್ಲೂ ಉತ್ತರ ಕರ್ನಾಟಕ ಭಾಗದಲ್ಲಿ ರೇಷ್ಮೆ ಬೆಳೆಯನ್ನು ಅಭಿವೃದ್ಧಿಪಡಿಸಲು ಸಾಕಷ್ಟು ಸಹಾಯಧನ ತೆಗೆದುಕೊಂಡು ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟಲಾಗಿದೆ; ಅದು ರಾಯಚೂರಿನಲ್ಲಿರಬಹುದು, ಹುಬ್ಬಳ್ಳಿಯಲ್ಲಿರಬಹುದು ಬೇರೆ ಬೇರೆ ಜಿಲ್ಲೆಗಳಲ್ಲಿ, ಊರುಗಳಲ್ಲಿ ಇರಬಹುದು. ನಮ್ಮ ಜಿಲ್ಲೆ ರೇಷ್ಮೆ ಬೀಜಕ್ಕೆ ಹೆಸರಾದ ಜಿಲ್ಲೆ. ಅಲ್ಲಿ ಕಟ್ಟಡ ಕಟ್ಟಿ ಅವುಗಳ ಸದುಪಯೋಗ ಮಾಡಿಕೊಳ್ಳುತ್ತಿಲ್ಲ. ಅದು ಡೆಡ್ ಇನ್‌ವೆಸ್ಟ್‌ಮೆಂಟ್ ಆಗಿದೆ. ಸರ್ಕಾರ ಇದನ್ನು ಸದುಪಯೋಗಪಡಿಸಿಕೊಳ್ಳಲಿಕ್ಕೆ, ಆ ಮೂಲಕ ಉತ್ತರ ಕರ್ನಾಟಕ ಭಾಗದಲ್ಲಿ ರೇಷ್ಮೆ ಬೆಳೆಯನ್ನು ಅಭಿವೃದ್ಧಿಪಡಿಸಲಿಕ್ಕೆ ಯೋಚನೆ ಮಾಡಲಾಗಿದೆಯೇ ಎಂದು ನಾನು ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಹೆಚ್.ಎಂ. ರೇವಣ್ಣ:- ಮಾನ್ಯ ಅಧ್ಯಕ್ಷರೆ, ಕರ್ನಾಟಕದಲ್ಲಿ ರೇಷ್ಮೆ ಬಹಳ ಪ್ರಸಿದ್ಧಿಯನ್ನು ಪಡೆದಿರತಕ್ಕದ್ದು ನಮ್ಮ ಹಳೆಯ ಮೈಸೂರು ಭಾಗದ 5 ಜಿಲ್ಲೆಗಳಲ್ಲಿತ್ತು. 1970ರ ದಶಕದಲ್ಲಿ ಉತ್ತರ ಕರ್ನಾಟಕದಲ್ಲೂ ಕೂಡ ರೇಷ್ಮೆ ಬೆಳೆಯನ್ನು ಅಭಿವೃದ್ಧಿಪಡಿಸಬೇಕೆಂದು ರಾಷ್ಟ್ರೀಯ ರೇಷ್ಮೆ ಯೋಜನೆಯ ಅಡಿಯಲ್ಲಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿ, 30ರೇಷ್ಮೆ ಕೃಷಿ ಕ್ಷೇತ್ರಗಳನ್ನು ತೆರೆಯುವುದು, ಹೊಸದಾಗಿ ಆ ಭಾಗದ ಜನತೆ ರೇಷ್ಮೆ ಕೃಷಿಗೆ ಬರಬೇಕಾದ ಪರಿಸ್ಥಿತಿ ಇರುವುದರಿಂದ ಅವರು ಹಿಪ್ಪನೇರಳೆ ಬೆಳೆಯುವಂತಹ ತಿಳುವಳಿಕೆ, ಗೂಡನ್ನು ತಯಾರು ಮಾಡತಕ್ಕದ್ದು, ಮೊಟ್ಟೆ ಕೊಡತಕ್ಕದ್ದು-ಹೀಗೆ ಹಲವು ಹತ್ತು ಹಿಪ್ಪನೇರಳೆ ಬೆಳೆಯುವುದರಿಂದ ಹಿಡಿದು ಬಟ್ಟೆ ತಯಾರು ಆಗುವವರೆಗೂ ಮಾಡಬೇಕಾದ ಕಾರ್ಯಗಳ ಬಗ್ಗೆ ಅರಿವು ಮಾಡಿಕೊಟ್ಟು, ಲೀಲಿಂಗ್ ಸೆಂಟರ್ಸ್ ಕಾಮನ್ ರೀಲಿಂಗ್, ರೀಲಿಂಗ್ ಕಾಂಪ್ಲೆಕ್ಸ್ ಈ ರೀತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಆ ಭಾಗದಲ್ಲಿ ಗುಲ್ಬರ್ಗ, ಬಳ್ಳಾರಿ, ಬಿಜಾಪುರ, ಬೆಳಗಾವಿ ಉತ್ತರ ಕರ್ನಾಟಕದ ಈ ನಾಲ್ಕು ಜಿಲ್ಲೆಗಳಲ್ಲಿ ರಾಷ್ಟ್ರೀಯ ರೇಷ್ಮೆ ಯೋಜನೆ ಅಡಿಯಲ್ಲಿ ಈ ಭಾಗದ ಚಿತ್ರದುರ್ಗ, ತುಮಕೂರು ಹಾಸನ ಸೇರಿ 1083.73ಲಕ್ಷದಲ್ಲಿ ಹೊಸ ಪ್ರದೇಶಗಳಲ್ಲಿ ರೇಷ್ಮೆ ಅಭಿವೃದ್ಧಿಪಡಿಸಲು ಸರ್ಕಾರ ಕಾರ್ಯಕ್ರಮಗಳನ್ನು ಹಾಕಿಕೊಂಡು ಈ ಯೋಜನೆಯಡಿಯಲ್ಲಿ 470.8ಲಕ್ಷ ರೂಪಾಯಿಗಳ ಕಾಮಗಾರಿ ಕೆಲಸ ಕಾರ್ಯಗಳಾಗಿವೆ. ಅದರ ಅಡಿಯಲ್ಲಿ ಕಟ್ಟಡಗಳು ಮತ್ತು ಯಂತ್ರೋಪಕರಣಗಳು ಅದಕ್ಕೆ 610.65ಲಕ್ಷ ರೂಪಾಯಿಗಳು ವೆಚ್ಚವಾಗಿದೆ. ಆ ಭಾಗದಲ್ಲಿ ಹೆಚ್ಚು ಜನ ಇದರಲ್ಲಿ ಭಾಗಿಯಾಗುತ್ತಿದ್ದಾರೆ. ಉತ್ತರ ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿ ಕೆಲಸಗಳು ನಡೆಯುತ್ತಿವೆ. ಆದರೆ ಅಲ್ಲಿನ ಜನ ವಿವಿಧ ಹಂತಗಳಲ್ಲಿ ಮುಂದೆ ಬರಬೇಕಾಗಿದೆ. ಅವರು ತಯಾರು ಮಾಡಿದಂತಹ ಗೂಡನ್ನು ತೆಗೆದುಕೊಳ್ಳಲಿಕ್ಕೆ ಅಲ್ಲಿ ರೀಲರ್ಸ್ ಹೆಚ್ಚಿಗೆ ಇಲ್ಲ. ವಿವಿಧ ಹಂತಗಳಿಗೆ ಒಳಪಡುವ ಸಂದರ್ಭದಲ್ಲಿ ಅಲ್ಲಿ ಏನು ಬಿಲ್ಡಿಂಗ್‌ಗಳನ್ನು ಕಟ್ಟಲಾಗಿದೆ ಅದನ್ನು ಸರ್ಕಾರ ಅದು ಉಪಯೋಗವಾಗದ ಸಂದರ್ಭದಲ್ಲಿ ಅಧಿಕಾರಿಗಳ ಒಂದು ಸಮಿತಿ ಸಭೆ ಸೇರಿ ಆ ಕಟ್ಟಡಗಳನ್ನು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಮೂಲಕ ಬಾಡಿಗೆಗೆ ಕೊಡಬೇಕೆಂದು ತೀರ್ಮಾನವಾಗಿದೆ. ಕೆಲವು ಕಡೆ ಜನರು ಮುಂದೆ ಬಂದಿದ್ದಾರೆ. ಇನ್ನು ಕೆಲವು ಕಡೆ ಮುಂದೆ ಬಂದಿಲ್ಲ. ಆ ಕಟ್ಟಡಗಳನ್ನು ವಿಲೇವಾರಿ ಮಾಡಲಿಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಪಿ.ಹೆಚ್. ಪೂಜಾರ್:- ಮಾನ್ಯ ಅಧ್ಯಕ್ಷರೆ, ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಗುಲ್ಬರ್ಗ, ಬೆಳಗಾಂ ಮತ್ತು ಬಳ್ಳಾರಿ, ಬಿಜಾಪುರ ಭಾಗದಲ್ಲಿ ರೇಷ್ಮೆ ಕೇಂದ್ರಗಳನ್ನು ಸ್ಥಾಪನೆ ಮಾಡಿದ್ದನ್ನು ನಾನು ಸ್ವಾಗತ ಮಾಡುತ್ತಿದ್ದೇನೆ. ಬಾಗಲಕೋಟೆ ಜಿಲ್ಲೆ ಕೂಡ ವಿಶೇಷವಾಗಿ ರೇಷ್ಮೆ ಬೆಳೆಯಲಿಕ್ಕೆ ಅತ್ಯಂತ ಸೂಕ್ತವಾದ ಜಿಲ್ಲೆಯೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ರೇಷ್ಮೆಯ ಬಗ್ಗೆ ವೈಜ್ಞಾನಿಕ ತಿಳುವಳಿಕೆ ವಿಶೇಷವಾದ ಮಾಹಿತಿ ಆ ಭಾಗದ ರೈತರಿಗೆ ನೀಡಲಾರದ ಕಾರಣಕ್ಕಾಗಿ ಹಾಗೆ ಆಗಿದೆ. ಪ್ರತಿ ವರ್ಷ ಸಣ್ಣ ರೈತರು ರೇಷ್ಮೆ ಕಡ್ಡಿಯನ್ನು ಅಲ್ಲಲ್ಲಿ ನೆಡುತ್ತಾರೆ. ಒಂದು ವರ್ಷ, ಎರಡು ವರ್ಷ, ಮೂರು ವರ್ಷ ಅವರು ಬೆಳೆ ತೆಗೆದುಕೊಳ್ಳುತ್ತಾರೆ; ಪ್ರಚಾರ ಮಾಡುತ್ತಾ ಹೋಗುತ್ತಾರೆ. ಆಮೇಲೆ ಅದನ್ನು ಕೈಬಿಡುವಂತಹದ್ದು ನಡೆದಿದೆ. ಇಲಾಖೆಯವರು ಈ ವರ್ಷ ನೂರು ಎಕರೆಯಲ್ಲಿ ಹಿಪ್ಪನೇರಳೆ ಬೆಳೆಯುವಂತಹ ಗುರಿಯನ್ನು ಇಟ್ಟುಕೊಂಡಿರುತ್ತಾರೆ. ಹಿಂದಿನ ಮೂರು ವರ್ಷಗಳ ಇತಿಹಾಸವನ್ನು ನೋಡಿದಾಗ ಅದರಲ್ಲಿ ಯಾರೋ ನೂರು, ನೂರಐವತ್ತು ಎಕರೆ ಬಿಡುವಂತಹದ್ದು ಇದೆ. ಆ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಆ ಭಾಗದಲ್ಲಿ ಕೊಡುತ್ತಿಲ್ಲ. ಈ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಬಾಗಲಕೋಟೆಗೂ ಕೂಡ ವಿಶೇಷವಾದ ಏರಿಯಾ ಎಂದು ಪರಿಗಣನೆ ಮಾಡಿ ಅಲ್ಲಿ ಕೂಡ ಒಂದು ಕೇಂದ್ರ ಸ್ಥಾಪನೆ ಮಾಡಬೇಕೆನ್ನುವ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ:- ಸನ್ಮಾನ್ಯ ಅಧ್ಯಕ್ಷರೇ, ನಾನು ಒಂದು ಸಣ್ಣ ಪ್ರಶ್ನೆಯನ್ನು ಕೇಳುತ್ತೇನೆ. ಉತ್ತರ ಕರ್ನಾಟಕದಲ್ಲಿ ಈ ರೇಷ್ಮೆ ಮಹಿವಾಟಿನಲ್ಲಿ ಪ್ರತಿ ಕೆ.ಜಿ. ಗೂಡಿಗೆ ಐದು ರೂಪಾಯಿ ಪ್ರೋತ್ಸಾಹ ಧನ ಎಂದು ಕೊಡುತ್ತಿದ್ದರು. ಅದನ್ನು ಈಗ ನಿಲ್ಲಿಸಿಬಿಟ್ಟಿದ್ದಾರೆ ಎಂದು ಅಧಿಕಾರಿಗಳು ಹೇಳುತ್ತಾರೆ. ಇಲ್ಲಿ ಕೇಳಿದರೆ ಅದನ್ನು ನಿಲ್ಲಿಸಿಲ್ಲ ಎನ್ನುತ್ತಾರೆ. ಈಗ ಎರಡು ವರ್ಷಗಳಿಂದ ರೈತರಿಗೆ ಹಣ ವಿತರಣೆಯಾಗಿಲ್ಲ. ದಯವಿಟ್ಟು ಮಾನ್ಯ ಸಚಿವರು ಇದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್.ಎಂ.ರೇವಣ್ಣ:- ಮೊದಲನೆಯದಾಗಿ ಬಾಗಲಕೋಟೆ ಭಾಗದಲ್ಲಿ ರೇಷ್ಮೆ ಬೆಳೆಗಾರರಿಗೆ ತರಬೇತಿ ಕೊಡಬೇಕು ಎನ್ನತಕ್ಕಂಥ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಅದಕ್ಕಾಗಿ ಅವರು ಕೋಲಾರಕ್ಕೆ ಬಂದು ನೋಡಿಕೊಂಡು ಹೋಗುವಂಥ, ಇಲ್ಲಿಯ ಬೇಸಾಯ ಕ್ರಮ ಅಭ್ಯಸಿಸಲು ಇಲ್ಲಿ ಇದ್ದು ಕಲಿತುಕೊಂಡು ಹೋಗುವಂಥ ಆ ಯೋಜನೆ ನಮ್ಮಲ್ಲಿ ಇದೆ. ಅದನ್ನು ಅವರು ಉಪಯೋಗಿಸಿಕೊಳ್ಳಬಹುದು. ಎರಡನೆಯದಾಗಿ ಮಾನ್ಯ ಶಾಸಕರು ಏನು ಐದು ರೂಪಾಯಿ ಪ್ರೋತ್ಸಾಹಧನದ ಬಗ್ಗೆ ಹೇಳಿದ್ದಾರೆ. ಆಲ್ಲಿ ಅದು ಹೊಸ ಕ್ಷೇತ್ರವಾಗಿರುವುದರಿಂದ ಗೂಡು ಬೆಳೆಯುವವರಿಗೆ ಪ್ರೋತ್ಸಾಹ ಧನ ಕೊಡುವುದು ಚಾಲ್ತಿಯಲ್ಲಿದೆ ಮತ್ತು ಗೂಡನ್ನು ಬಿಚ್ಚುವಂಥವರು ಏನಿದ್ದಾರೆ, ರೀಲರ್ಸ್‌ಗೆ ಐವತ್ತು ರೂಪಾಯಿ ಕೊಡುವುದು - ಇವೆರಡೂ ಕೂಡ ಇವತ್ತಿಗೂ ಇದೆ. ಅದನ್ನು ಸರಿಯಾದ ರೀತಿಯಲ್ಲಿ ತಲುಪಿಸುವ ಕೆಲಸವನ್ನು ನಾನು ಮಾಡುತ್ತೇನೆ.

ಮಾಗಡಿ ವಿಧಾನಸಬಾ ಕ್ಷೇತ್ರದಲ್ಲಿ ಮೀನುಗಾರಿಕೆ ಹಾಗೂ ಮೀನುಗಾರರ ಅಭಿವೃದ್ಧಿಗಾಗಿ ಕೈಗೊಂಡಿರುವ ಕಾರ್ಯಕ್ರಮಗಳು

188(1504) ಶ್ರೀ ಸಿ.ಚನ್ನಿಗಪ್ಪ(ಕೊರಟಗೆರೆ) : ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?